ನಾಂದಿಪದ

# ಬೆಳಕಿನ ಸಸಿಗಳು

**ಈ** ಸಂಚಿಕೆ ಅತಿ ಸಣ್ಣಕತೆಗಳ ವಿಶೇಷ ಅಂಕವಾಗಿದೆ. ಕನ್ನಡದ ಪ್ರತಿಭಾಶಾಲಿ ಕತೆಗಾರರು ಈ ಸಂಚಿಕೆಗಾಗಿಯೇ ಕತೆಗಳನ್ನು ಬರೆದುಕೊಟ್ಟಿದ್ದಾರೆ. ಇಲ್ಲಿ ವಿವಿಧ ತಲೆಮಾರಿನ ಕತೆಗಾರರು ಒಂದೆಡೆ ಸೇರಿರುವುದು ಮುಖ್ಯ ವಿದ್ಯಮಾನ. 28 ಅತಿ ಸಣ್ಣಕತೆಗಳನ್ನು ಒಳಗೊಂಡಿರುವ ಈ ಸಂಚಿಕೆ ಕಥಾಪ್ರಿಯರಿಗೆ ರುಚಿಸಬಹುದು. ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ, ಕಥಾಪರಂಪರೆಯ ದೃಷ್ಟಿಯಿಂದಲೂ ಈ ಸಂಚಿಕೆ ಮಹತ್ವದ್ದಾಗಿದೆ. ಮತ್ತು ಇವೆಲ್ಲವೂ ಕನ್ನಡ ಕತೆಗಳ ಸ್ವರೂಪ, ಗುಣಲಕ್ಷಣ, ಆಳಅಗಲವನ್ನು ತೋರುತ್ತವೆ.

ಅತಿ ಸಣ್ಣಕತೆಗಳನ್ನು ಬರೆಯುವುದು ಸುಲಭದ ಸಂಗತಿ ಏನಲ್ಲ. ಅದು ನಗೆಹನಿಯಲ್ಲ, ಸಣ್ಣ ಘಟನೆಯೊಂದರ ವಿವರಣೆ ಅಲ್ಲ. ಅದಕ್ಕೆ ಅದರದೇ ಆದ ಗುಣಲಕ್ಷಣಗಳಿವೆ. ಅದು ಕವಿತೆಗೆ ಹತ್ತಿರವಾದ ಪ್ರಕಾರ. ಸಣ್ಣದು ಎಂದೊಡನೆ ಅದರ ಪ್ರಭಾವವನ್ನು ಕಡೆಗಣಿಸುವಂತಿಲ್ಲ. ಅತ್ಯುತ್ತಮ ಅತಿ ಸಣ್ಣಕತೆಯೊಂದು ತನ್ನ ಕಿರು ದೇಹದಲ್ಲಿನ ಅಪಾರ ಚೈತನ್ಯದಿಂದಲೇ ಓದುಗರನ್ನು ಬಹುಕಾಲ ಕಾಡಬಲ್ಲದು. ಇಲ್ಲಿ ಕೊಡಲಾಗಿರುವ ಕತೆಗಳು ಓದುಗರನ್ನು ಅನಿರೀಕ್ಷಿತವಾಗಿ ಚಕಿತಗೊಳಿಸುತ್ತವೆ, ಖುಷಿಗೊಳಿಸುತ್ತವೆ, ದಿಗ್ಭ್ರಮೆಗೊಳಿಸುತ್ತವೆ ಮತ್ತು ಸುತ್ತಣ ಜಗತ್ತನ್ನು ವಿಡಂಬಿಸುತ್ತವೆ. ಇನ್ನು ಕೆಲವು ಭ್ರಾಮಕಲೋಕಕ್ಕೆ ಕರೆದೊಯ್ಯಬಲ್ಲವು. ಕೆಲವು ಕತೆಗಳು ತಮ್ಮ ತೀಕ್ಷ್ಣ, ಹರಿತ ಮುಕ್ತಾಯದಲ್ಲಿ ಹೊಸ ಲೋಕವೊಂದನ್ನೇ ಕಣ್ಣೆದುರು ತೆರೆಯಬಲ್ಲವು.

ದೃಷ್ಟಾಂತ ಮತ್ತು ನೀತಿ ಕತೆಗಳೂ ಇದೇ ಜಾತಿಗೆ ಸೇರಿದವು. ಜೆನ್, ಸೂಫಿ ಕತೆಗಳು ಅತಿ ಸಣ್ಣಕತೆಗೆ ಉತ್ತಮ ಉದಾಹರಣೆಗಳಾಗಿವೆ. ನಮ್ಮ ಆಧುನಿಕ ಬದುಕಿನ ಹಲವು ಸ್ತರಗಳನ್ನು ತಮ್ಮ ಸೀಮಿತ ಪರಿಧಿಯಲ್ಲೇ ಹಿಡಿಯಲು ಹವಣಿಸುವ ಇಲ್ಲಿನ ಕತೆಗಳು ಓದುಗರನ್ನು ಕ್ಷಣಕಾಲವಾದರೂ ತಡೆದು ನಿಲ್ಲಿಸುತ್ತವೆ, ಮುದಗೊಳಿಸುತ್ತವೆ, ಕಾಡುತ್ತವೆ ಎಂಬುದು ನಮ್ಮ ನಂಬಿಕೆ. ಈ ಕತೆಗಳೆಂಬ ಬೆಳಕಿನ ಸಸಿಗಳು ಓದುಗರ ಮನದಲ್ಲಿ ಬೆಳೆಯುವಂತಾಗಲಿ, ಹೊಳೆಯುವಂತಾಗಲಿ. 'ಮಯೂರ' ಇಂತಹ ಕತೆಗಳನ್ನು ಮುಂದೆಯೂ ಸ್ವಾಗತಿಸುತ್ತದೆ.

**ಸಂದೀಪ ನಾಯಕ**

